ಸಾಗುವಳಿ ನಡೆಯುತ್ತಿದೆ? ಮತ್ತು ಈ ಸಾಗುವಳಿದಾರರ ಮೇಲೆ ಕೈಗೊಂಡಿರುವ ಕ್ರಮಗಳ ವಿವರ ನೀಡುವುದು.

ಶ್ರೀ ಹೆಚ್. ವೈ. ಮೇಟಿ (ಅರಣ್ಯ ಸಚಿವರು) :

1) ಬಂದಿದೆ.

ವಿರಾಜಪೇಟೆ ತಾಲ್ಲೂಕಿನಲ್ಲಿ ದಿನಾಂಕ : 27-4-1978 ಕ್ಕಿಂತ ಪೂರ್ವದಲ್ಲಿ ಅರಣ್ಯ ಜಮೀನನ್ನು ಒತ್ತುವರಿ ಮಾಡಿದ (ಸಾಗುವಳಿ ಸೇರಿ) ಪ್ರಕರಣದ ಪ್ರದೇಶ ಗುರುತಿಸಿದೆ. ಇವುಗಳನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ, 1980ರ ಪ್ರಕಾರ ಸಕ್ರಮಗೊಳಿಸುವ ಬಗ್ಗೆ ರಾಜ್ಯದ ಇತರೆ ಇಂತಹ ಪ್ರಕರಣಗಳ ಜೊತೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದ್ದು ಅನುಮತಿಯನ್ನು ನಿರೀಕ್ಷಿಸಲಾಗಿದೆ.

2) ವೀರಾಜಪೇಟೆ ತಾಲ್ಲೂಕಿನಲ್ಲಿ ಒಟ್ಟು 520 ಎಕರೆಯಷ್ಟು ಅರಣ್ಯ ಪ್ರದೇಶವು ಒತ್ತುವರಿ (ಸಾಗುವಳಿ ಸೇರಿ) ಆಗಿರುತ್ತದೆ. ಇವುಗಳನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ, 1980ರ ಪ್ರಕಾರ ಸಕ್ರಮಗೊಳಿಸುವ ಬಗ್ಗೆ ರಾಜ್ಯದ ಇತರೆ ಅಂತಹ ಪ್ರಕರಣಗಳ ಜೊತೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದ್ದು ಅನುಮತಿಯನ್ನು ನಿರೀಕ್ಷಿಸಲಾಗಿದೆ. ಕೇಂದ್ರ ಸರ್ಕಾರದ ಅನುಮೋದನೆ ಬಂದ ನಂತರ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ಪ್ರತಿ ತಾಲ್ಲೂಕಿಗೆ ದಂತ ವೈದ್ಯರ ನೇಮಕ

354 - ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ತಾಲ್ಲೂಕಿಗೆ ಒಬ್ಬ ದಂತ ವೈದ್ಯರನ್ನು ನೇಮಿಸಲು ಸರ್ಕಾರದವರು ಪರಿಶೀಲಿಸುವರೆ!

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಪರಿಶೀಲಿಸಲಾಗುತ್ತಿದೆ.

ಆ) ರಾಜ್ಯದಲ್ಲಿ 118 ಸಹಾಯಕ ದಂತ ವೈದ್ಯರುಗಳು, 33 ಉಪ ಸಹಾಯಕ ದಂತ ವೈದ್ಯರು ಮತ್ತು 2 ದಂತ ಸರ್ಜನರ ಹುದ್ದೆಗಳು ಮಂಜೂರಾಗಿರುತ್ತವೆ. ಇವುಗಳಲ್ಲಿ 78 ಸಹಾಯಕ ದಂತ ವೈದ್ಯರುಗಳು ಮತ್ತು 21 ಉಪ ದಂತ ವೈದ್ಯರುಗಳು ಹಾಗೂ 2 ದಂತ ಶಸ್ತ್ರ ಚಿಕಿತ್ಸಕರುಗಳ ಹುದ್ದೆಗಳು ಭರ್ತಿಯಾಗಿವೆ. ಮಿಕ್ಕ ಖಾಲಿ ಇರುವ (52) ಸಹಾಯಕ ದಂತ ವೈದ್ಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ.